# ಕರಾವಳಿ ಜಲಕೃಷಿ ಪ್ರಾಧಿಕಾರ ಕಾಯ್ದೆಯ (ತಿದ್ದುಪಡಿ) ಮಸೂದೆ, 2022

**ಪರಿಚಯ**: - ಪರಿಸರ ಸ್ನೇಹಿ ಸುಸ್ಥಿರ ಉತ್ಪಾದನೆಯನ್ನು ಸಾಧಿಸಲು ವೈಜ್ಞಾನಿಕ ತತ್ವಗಳ ಮೇಲೆ ದೇಶದಲ್ಲಿ ಜಲಕೃಷಿ ಚಟುವಟಿಕೆಯ ಅಭಿವೃದ್ಧಿ ಮತ್ತು ಕಾರ್ಯಾಚರಣೆಯನ್ನು ನಿಯಂತ್ರಿಸುವ ಮತ್ತು ನಿರ್ವಹಿಸುವ ಅವಶ್ಯಕತೆ ಇದೆ. ದೇಶದ ಕರಾವಳಿ ಪ್ರದೇಶಗಳಲ್ಲಿ ಕರಾವಳಿ ಜಲಚರ ಸಾಕಣೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಿಯಂತ್ರಿಸಲು ಕರಾವಳಿ ಜಲಕೃಷಿ ಪ್ರಾಧಿಕಾರವನ್ನು ಸ್ಥಾಪಿಸಲು ಕರಾವಳಿ ಜಲಕೃಷಿ ಪ್ರಾಧಿಕಾರ ಕಾಯ್ದೆ, 2005 (CAA Act, 2005)ನ್ನು ಸಂಸತ್ತು ಜಾರಿಗೆ ತಂದಿದೆ. ಇದು ಜಾರಿಗೆ ಬಂದ ನಂತರ ಕಳೆದ ಹದಿನೇಳು ವರ್ಷಗಳಲ್ಲಿ, ಈ ಕಾಯಿದೆಯು ಪರಿಸರವನ್ನು ರಕ್ಷಿಸುವ ಕಾಳಜಿಯನ್ನು ಹೊಂದಿದ್ದು, ದೇಶದಲ್ಲಿ ಕರಾವಳಿ ಜಲಚರಗಳ ನಿಯಂತ್ರಿತ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸಕ್ರಿಯಗೊಳಿಸಿದೆ. ಇದು ಲಕ್ಷಾಂತರ ಉದ್ಯೋಗಗಳ ಸೃಷ್ಟಿ, ಸ್ವ-ಉದ್ಯೋಗದ ಅವಕಾಶಗಳು, ಜಲಚರಗಳ ವರ್ಧಿತ ಆದಾಯಗಳು ಮತ್ತು ಸದಾ ಚಟುವಟಿಕೆಯಿಂದ ಕೂಡಿದ ಜಲಕೃಷಿ ಬೆಂಬಲ ಉದ್ಯಮದ ಅಭಿವೃದ್ಧಿ ಸೇರಿದಂತೆ ಜಲಕೃಷಿಯಲ್ಲಿ ವ್ಯಾಪಾರ ಮತ್ತು ಉದ್ಯಮಶೀಲತೆಯ ವರ್ಧನೆಯನ್ನು ಸುಗಮಗೊಳಿಸಿದೆ. ಇಂದು, ಭಾರತವು ವಿಶ್ವದ ಹಿನ್ನೀರು ಜಲಕೃಷಿ ಉತ್ಪನ್ನಗಳ ಪ್ರಮುಖ ಉತ್ಪಾದಕರು ಮತ್ತು ರಫ್ತುದಾರರಲ್ಲಿ ಒಂದಾಗಿದ್ದು, ಸಾವಿರಾರು ಕೋಟಿ ರೂಪಾಯಿಗಳ ವಹಿವಾಟು ನಡೆಸುವತ್ತ ಸಾಗಿದೆ.

ಒಂದು ಉತ್ತಮ ಶಾಸನವು ಪ್ರಗತಿಪರವಾಗಿರತಕ್ಕದ್ದು ಮತ್ತು ಕಾಲಾನಂತರದಲ್ಲಿ ಅಭಿವೃದ್ಧಿ ಹೊಂದುವ ಆಕಾಂಕ್ಷೆಗಳಿಗೆ ಪೂರಕವಾಗಿರಬೇಕು. CAA ಕಾಯ್ದೆ 2005 ರ ಅನುಷ್ಠಾನದ ಅನುಭವದ ಹಿನ್ನೆಲೆಯಲ್ಲಿ, ಕಾರ್ಯವಿಧಾನಗಳನ್ನು ಸರಳಗೊಳಿಸುವುದು ಮತ್ತು ಜಲಕೃಷಿ ಚಟುವಟಿಕೆಗಳ ನೋಂದಣಿಯನ್ನು ತ್ವರಿತವಾಗಿ ನೀಡುವುದು, ಕಾಯಿದೆಯ ಅಡಿಯಲ್ಲಿ ಅನುಸರಣೆ ಮತ್ತು ನಿಯಂತ್ರಣದ ಹೊರೆಯನ್ನು ಕಡಿಮೆ ಮಾಡುವುದು ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು, ನಿಯಂತ್ರಣ ಮತ್ತು ಮಾರ್ಗಸೂಚಿಗಳು ಮತ್ತು ಅನುಷ್ಠಾನದ ತೊಂದರೆಗಳನ್ನು ನಿವಾರಿಸುವ ಕುರಿತಂತೆ, ಕಳೆದ ಹಲವಾರು ವರ್ಷಗಳಿಂದ ಜಲಕೃಷಿ ಚಟುವಟಿಕೆಯ ವಿವಿಧ ಪಾಲುದಾರರಿಂದ ಮನವಿಗಳು ಸ್ವೀಕೃತವಾಗಿದೆ.

ಆದ್ದರಿಂದ, ಸಾರ್ವಜನಿಕ ಹಿತಾಸಕ್ತಿಯಿಂದ, ನಿಯಂತ್ರಕ ಅನುಸರಣೆಗಳು, ಅಪರಾಧಗಳು ಮತ್ತು ದಂಡಗಳು; ಕಾರ್ಯಸಾಧ್ಯವಾದಲ್ಲೆಲ್ಲಾ ಅಪರಾಧ(ಗಳ) ನಿರಪರಾಧೀಕರಣಗೊಳಿಸುವುದು; ಕರಾವಳಿ ಜಲಕೃಷಿಯ ವ್ಯಾಖ್ಯೆಯಲ್ಲಿನ ಗೊಂದಲಗಳನ್ನು ನಿವಾರಿಸುವುದು, ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರಸ್ತುತ ಇರುವ ವಿಧಾನಗಳನ್ನು ಸರಳೀಕರಣಗೊಳಿಸುವುದು; ಸದರಿ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠನಕ್ಕೆ ತಂದು ವಿಧಿವಿಧಾನಗಳಲಿನ ತೊಡಕುಗಳನ್ನು ನಿವಾರಿಸುವುದನ್ನು ಒಳಗೊಂಡಂತೆ ಸುಗಮ ವ್ಯವಹಾರಕ್ಕೆ ಅನುವು ಮಾಡಿಕೊಡುವ ಉದ್ದೇಶಗಳಿಂದ CAA ಕಾಯ್ದೆ, 2005 ರ ಕಾಯ್ದೆಯಲ್ಲಿನ ಅವಕಾಶಗಳನ್ನು ಮರುಪರಿಶೀಲಿಸಿ ಕ್ಷೇತ್ರದ ಅಗತ್ಯಕನುಗುಣವಾಗಿ, ಹಾಗೂ ಪಾಲುದಾರರಿಗೆ ನಿಯಂತ್ರಣ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಶೀಘ್ರವಾಗಿ ತಿದ್ದುಪಡಿಗಳನ್ನು ಅಳವಡಿಸುವ ಅವಶ್ಯಕತೆಯನ್ನು ಮನಗಾಣಲಾಗಿದೆ. ಅದರಂತೆ, ಕರಾವಳಿ ಜಲಕೃಷಿ ಪ್ರಾಧಿಕಾರ ಕಾಯ್ದೆಯ (ತಿದ್ದುಪಡಿ) ಮಸೂದೆ, 2022 ಇದರ ಕರಡನ್ನು ತಯಾರಿಸಿ ಇಲಾಖೆಯ (ಭಾರತ ಸರ್ಕಾರದ ಮೀನುಗಾರಿಕೆ ಇಲಾಖೆ, ಕರಾವಳಿ ಜಲಕೃಷಿ ಪ್ರಾಧಿಕಾರ) ಜಾಲತಾಣ (ವೆಬ್‌ಸೈಟ್)ದ ಸಾರ್ವಜನಿಕರ ಡೊಮೈನ್‌ನಲ್ಲಿ ಪ್ರದರ್ಶಿಸಿ ಸಾರ್ವಜನಿಕರಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿದೆ.

.

## ಕಾಯ್ದೆಯಲ್ಲಿ ಪ್ರಸ್ತಾಪಿಸಲಾದ ಪ್ರಮುಖ ತಿದ್ದುಪಡಿಗಳ ಸಾರಾಂಶ

ವ್ಯಾಖ್ಯಾನಗಳ ಸಮಗ್ರ ಸೇರ್ಪಡೆ ಮತ್ತು "ಫಾರ್ಮ್ ಅಥವಾ ಫಾರ್ಮ್ಸ್" ಪದಗಳ ಬದಲಿಗೆ "ಚಟುವಟಿಕೆ ಅಥವಾ ಚಟುವಟಿಕೆಗಳು" ಎಂಬ ಪದಗಳನ್ನು ಪರ್ಯಾಯವಾಗಿ ಸೇರಿಸುವುದು

ಕರಾವಳಿ ಜಲಕೃಷಿಯ ಸುಸ್ಥಿರ ಅಭಿವೃದ್ಧಿಗಾಗಿ ಕಾಯಿದೆಯ ವ್ಯಾಪ್ತಿಯನ್ನು ಜಲಕೃಷಿ 'ಫಾರ್ಮ್'ಗಳಿಗಷ್ಟೇ ಸೀಮಿತಗೊಳಿಸದೆ, ಎಲ್ಲಾ ಚಟುವಟಿಕೆಗಳನ್ನು ಒಳಗೊಂಡಂತೆ ಅದರ ಪ್ರಸ್ತುತ ರೂಪದಲ್ಲಿ CAA ಕಾಯ್ದೆ, 2005 ರ ವ್ಯಾಪ್ತಿಯನ್ನು ವಿಸ್ತರಿಸಲು ಉದ್ದೇಶಿಸಲಾಗಿದೆ. ಆದ್ದರಿಂದ "ಫಾರ್ಮ್ ಅಥವಾ ಫಾರ್ಮ್ಸ್" ಪದವನ್ನು "ಚಟುವಟಿಕೆ ಅಥವಾ ಚಟುವಟಿಕೆಗಳು" ಎಂಬ ಪದದೊಂದಿಗೆ ಬದಲಿಸಲು ಪ್ರಸ್ತಾಪಿಸಲಾಗಿದೆ. ಹೆಚ್ಚುವರಿಯಾಗಿ, ಪ್ರಸ್ತುತ ತಿದ್ದುಪಡಿಗಳ ಅಡಿಯಲ್ಲಿ ವರ್ತಮಾನದ ಅಗತ್ಯಗಳಿಗೆ ಅನುಗುಣವಾಗಿ ಕೆಲವು ವ್ಯಾಖ್ಯಾನಗಳನ್ನು ಪ್ರಸ್ತಾಪಿಸಲಾಗಿದೆ.

## ಅಧೀನ ಕಚೇರಿಗಳನ್ನು ಸ್ಥಾಪಿಸಲು ಅವಕಾಶ

ಕರಾವಳಿ ಜಲಕೃಷಿಯನ್ನು ವೈಜ್ಞಾನಿಕವಾಗಿ ಮೇಲ್ವಿಚಾರಣೆ ಮಾಡದ ಹೊರತು ಮತ್ತು ನ್ಯಾಯಯುತವಾಗಿ ನಿರ್ವಹಿಸದ ಹೊರತು, ಇದು ಸುಸ್ಥಿರ ಚಟುವಟಿಕೆಯಾಗದೇ, ಕರಾವಳಿ ಪ್ರದೇಶಗಳಲ್ಲಿ ಪರಿಸರ ಮತ್ತು ಸಾಮಾಜಿಕ ಕಾಳಜಿಗೆ ಧಕ್ಕೆ ಉಂಟುಮಾಡಬಹುದು. ಆದ್ದರಿಂದ, ಜಲಕೃಷಿ ಪ್ರಾಧಿಕಾರವು, ದ್ವೀಪಗಳು ಸೇರಿದಂತೆ ಇಡೀ ದೇಶದ ಕರಾವಳಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕರಾವಳಿ ಜಲಕೃಷಿ ಚಟುವಟಿಕೆಗಳನ್ನು ನಿಯಂತ್ರಿಸುವ ಅಗಾಧವಾದ ಜವಾಬ್ದಾರಿಯನ್ನು ಹೊಂದಿದೆ. ಕರಾವಳಿ ಜಲಕೃಷಿ ಪ್ರಾಧಿಕಾರ ಸ್ಥಾಪನೆಯ ಪ್ರಾರಂಭಿಕ ಪ್ರಕ್ರಿಯೆಯಲ್ಲಿ ಕರಾವಳಿ ಜಲಕೃಷಿ ಅಭಿವೃದ್ಧಿಯಲ್ಲಿನ ಬೆಳವಣಿಗೆ ವೇಗ ಮತ್ತು ಪ್ರಮಾಣ, ಹಾಗೂ ಸಧೃಢ ಸಂಸ್ಥೆಯ ಸ್ಥಾಪನೆಯ ಅಗತ್ಯತೆಯನ್ನು ಅಂದಾಜಿಲಾಗಿರಲಿಲ್ಲ. ಬದಲಾದ ಜಲಕೃಷಿ ಸನ್ನಿವೇಶವು ಕರಾವಳಿ ಜಲಕೃಷಿ ಚಟುವಟಿಕೆಗಳ ಕಟ್ಟುನಿಟ್ಟಾದ ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಅಗತ್ಯತೆ ಅನಿವಾರ್ಯವಾಗಿದ್ದು, ದೇಶದ ಸಾರ್ವಜನಿಕ ಹಿತಾಸಕ್ತಿಯಲ್ಲಿ ಕರಾವಳಿ ಜಲಕೃಷಿ ನಿಯಂತ್ರಣ ಚಟುವಟಿಕೆಗಳನ್ನು ವಿಕೇಂದ್ರೀಕರಿಸಲು, ಪರಿಸರ ಸಂರಕ್ಷಣೆ ಮತ್ತು ಉತ್ಪಾದನಾ ಸುಸ್ಥಿರತೆಯನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ವಿವಿಧ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕರಾವಳಿ ಜಲಕೃಷಿ ಪ್ರಾಧಿಕಾರದ ಪ್ರಾದೇಶಿಕ ಕಚೇರಿಗಳನ್ನು ಸ್ಥಾಪಿಸುವ ಮೂಲಕ ಕರಾವಳಿ ಜಲಕೃಷಿ ಪ್ರಾಧಿಕಾರವನ್ನು ಸಮರ್ಪಕವಾಗಿ ಸಧೃಢಗೊಳಿಸುವ ಅಗತ್ಯವಿದೆ. ಆದ್ದರಿಂದ CAA ಕಾಯ್ದೆಯ ಸೆಕ್ಷನ್ 4(2) ಅನ್ನು ಪ್ರಾಧಿಕಾರಕ್ಕೆ 'ಅಧೀನ ಕಚೇರಿ'ಗಳ ಸ್ಥಾಪನೆಯನ್ನು ಸೇರ್ಪಡೆಗೊಳಿಸಿ ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

## ಪ್ರಾಧಿಕಾರದ ನಿಯಮಿತ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಪ್ರಾಧಿಕಾರದ ಸಭೆಗಳನ್ನು ಊರ್ಜಿತಗೊಳಿಸುವಿಕೆ

ಪ್ರಾಧಿಕಾರದ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಜಲಕೃಷಿ ಚಟುವಟಿಕೆಗಳಿಗೆ ನೋಂದಣಿಗಳನ್ನು ನೀಡುವುದು ಅಡ್ಡಿಯಾಗಬಹುದು. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಅಥವಾ ಅಧ್ಯಕ್ಷರ ಹುದ್ದೆ ಖಾಲಿ ಇದ್ದಾಗ ಪ್ರಾಧಿಕಾರದ ಸಭೆಗಳ ನಡವಳಿಗಳಿಗೆ ಸಂಬಂಧಿಸಿದಂತೆ ಅಧಿನಿಯಮದಲ್ಲಿನ ಅಸ್ಪಷ್ಟತೆಯನ್ನು ತೆಗೆದುಹಾಕಲು, ಕಾಯ್ದೆಯಲ್ಲಿ ಸ್ಪಷ್ಟವಾದ ನಿಬಂಧನೆಗಳನ್ನು ಮಾಡಲು ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದೆ. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಪ್ರಾಧಿಕಾರದ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಅಧ್ಯಕ್ಷರು ಯಾವುದೇ ಇತರ

ಸದಸ್ಯರನ್ನು ನಾಮನಿರ್ದೇಶನ ಮಾಡಲು ಅಥವಾ ಸದಸ್ಯರಿಂದ ಅಧ್ಯಕ್ಷರಾಗಿ ಆಯ್ಕೆ ಮಾಡಿ ನಿಯಮಿತ ಪ್ರಾಧಿಕಾರದ ಸಭೆಯನ್ನು ಕರೆದು ನಡೆಸಲು ಅನುವುಮಾಡಲಾಗಿದೆ.

**ಕರ್ತವ್ಯಗಳ ಸಮರ್ಥ ನಿರ್ವಹಣೆಗಾಗಿ ಸಮಿತಿಗಳನ್ನು ನೇಮಿಸಲು ಪ್ರಾಧಿಕಾರಕ್ಕೆ ಅಧಿಕಾರ ಪ್ರತ್ಯಾಯೋಜಿಸುವ ನಿಬಂಧನೆ**

ಕಾಯ್ದೆಯಡಿಯಲ್ಲಿ ತನ್ನ ಕರ್ತವ್ಯಗಳ ಸಮರ್ಥ ನಿರ್ವಹಣೆ ಮತ್ತು ಕಾರ್ಯಗಳ ನಿರ್ವಹಣೆಗಾಗಿ ಸಮಿತಿಗಳನ್ನು ನೇಮಿಸಲು ಪ್ರಾಧಿಕಾರಕ್ಕೆ ಸ್ಪಷ್ಟವಾಗಿ ಅಧಿಕಾರ ನೀಡಲು ಕಾಯ್ದೆಯಲ್ಲಿ ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದೆ. ಇದು ಅವುಗಳ ವಿಲೇವಾರಿ ಮತ್ತು ಮೇಲ್ವಿಚಾರಣೆ ಸೇರಿದಂತೆ ಜಲಕೃಷಿ ಚಟುವಟಿಕೆಗಳ ನೋಂದಣಿಗಳ ತ್ವರಿತ ವಿಲೇವಾರಿಯನ್ನು ಖಾತ್ರಿಪಡಿಸುತ್ತದೆ. ಇದಲ್ಲದೆ, ಪ್ರಾಧಿಕಾರವು ಈ ಸಮಿತಿಗಳ ಮೂಲಕ ತಜ್ಞರ ಸಲಹೆಯನ್ನು ಪಡೆಯಬಹುದಾಗಿದೆ.

**ಸದಸ್ಯ ಕಾರ್ಯದರ್ಶಿಗಳು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ**

ಪ್ರಸ್ತುತ ಕಾಯ್ದೆಯಡಿಯಲ್ಲಿ ಕರಾವಳಿ ಜಲಕೃಷಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ವಿವರಿಸಲಾಗಿಲ್ಲ. ಆದ್ದರಿಂದ, ಸದಸ್ಯ ಕಾರ್ಯದರ್ಶಿಗೆ ಸೂಕ್ತವಾಗಿ ಅಧಿಕಾರ ನೀಡಲು ಮತ್ತು ಕಾಯ್ದೆಯಡಿಯಲ್ಲಿ ಸ್ಪಷ್ಟವಾದ ಆದೇಶಗಳನ್ನು ಹೊರಡಿಸಲು ಸದಸ್ಯ ಕಾರ್ಯದರ್ಶಿಯ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ವಿವರಿಸಲು ಕಾಯ್ದೆಯನ್ನು ಸೂಕ್ತವಾಗಿ ತಿದ್ದುಪಡಿ ಮಾಡುವುದು ಅತ್ಯಗತ್ಯ ಎಂದು ಭಾವಿಸಲಾಗಿದೆ. ಸದಸ್ಯ ಕಾರ್ಯದರ್ಶಿಯು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು ಮತ್ತು ಕಾಯ್ದೆಯಡಿಯಲ್ಲಿ ಆದೇಶಗಳ ಉತ್ತಮ ನಿಯಂತ್ರಣ, ಸಮನ್ವಯ ಮತ್ತು ಸಮರ್ಥ ವಿತರಣೆಗಾಗಿ ಕನಿಷ್ಠ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ ಶ್ರೇಣಿಯ ಹುದ್ದೆಯಲ್ಲಿರುವುದು ಅಪೇಕ್ಷಣೀಯವಾಗಿದೆ ಎಂದು ಭಾವಿಸಲಾಗಿದೆ.

**ಪ್ರಾಧಿಕಾರದ ಕಾರ್ಯಗಳ ಸಮಗ್ರ ವಿಸ್ತರಣೆ**

ಕಾಯ್ದೆಯ IVನೇ ಅಧ್ಯಾಯವು ಈ ಕಾಯ್ದೆಯ ಅಡಿಯಲ್ಲಿ ಸ್ಥಾಪಿಸಲಾದ ಕರಾವಳಿ ಜಲಕೃಷಿ ಪ್ರಾಧಿಕಾರಕ್ಕೆ ಅಧಿಕಾರ ಮತ್ತು ಕಾರ್ಯಗಳನ್ನು ಒದಗಿಸುತ್ತದೆ. ಇದು ಕರಾವಳಿ ಪ್ರದೇಶಗಳಲ್ಲಿ ಜಲಚರ ಸಾಕಣೆ ಚಟುವಟಿಕೆಗಳ ಕಾರ್ಯಾಚರಣೆಗೆ ನಿಯಂತ್ರಣಗಳನ್ನು ಮಾಡಲು, ಕರಾವಳಿ ಜಲಚರ ಸಾಕಣೆ ಸಂಸ್ಥೆಗಳನ್ನು ಪರಿಶೀಲಿಸಲು, ಕರಾವಳಿ ಜಲಚರ ಸಾಕಣೆ ಕೇಂದ್ರಗಳು ಮತ್ತು ಹ್ಯಾಚರಿಗಳನ್ನು ನೋಂದಾಯಿಸಲು, ಮಾಲಿನ್ಯಕ್ಕೆ ಕಾರಣವಾಗುವ ಕರಾವಳಿ ಜಲಕೃಷಿ ಸಂಸ್ಥೆಗಳನ್ನು ತೆಗೆದುಹಾಕಲು ಅಥವಾ ಕೆಡವಲು ಆದೇಶಿಸಲು, ಇತ್ಯಾದಿ ಅಂಶಗಳು ಒಳಗೊಂಡಿರುತ್ತದೆ. ಬದಲಾದ ಜಲಕೃಷಿ ಸನ್ನಿವೇಶವು ಪ್ರಸ್ತುತವಿರುವ ಕರಾವಳಿ ಜಲಕೃಷಿ ಚಟುವಟಿಕೆಗೆ ಮಾತ್ರವಲ್ಲದೆ, ಹ್ಯಾಚರಿಗಳು, ನ್ಯೂಕ್ಲಿಯಸ್ ಬ್ರೀಡಿಂಗ್ ಸೆಂಟರ್‌ಗಳು (ಎನ್‌ಬಿಸಿ), ಬ್ರೂಡ್ ಸ್ಟಾಕ್ ಮಲ್ಟಿಪ್ಲಿಕೇಶನ್ ಕೇಂದ್ರಗಳು (ಬಿಎಂಸಿ) ಮತ್ತು ಜಲಕೃಷಿ ಹೂಡಿಕೆ ಘಟಕಗಳನ್ನೂ ಸಹ ಕಾಯ್ದೆಯ ವ್ಯಾಪ್ತಿಯಲ್ಲಿ ತರುವುದು ಅಗತ್ಯವಿದ್ದು ಕಾಯ್ದೆಯ ತಿದ್ದುಪಡಿಯಲ್ಲಿ ಸೇರ್ಪಡೆಗೆ ಪ್ರಸ್ತಾಪಿಸಲಾಗಿದೆ.

**CAA ನೀಡಿದ ಎಲ್ಲಾ ನೋಂದಣಿ ಅಥವಾ ಪ್ರಮಾಣಪತ್ರದ ಮಾನ್ಯತೆಯ ಅವಧಿಯಲ್ಲಿ ನಮ್ಯತೆ**

ಪ್ರಸ್ತುತ 5 ವರ್ಷಗಳಿಗೆ ನಿಗದಿಪಡಿಸಿರುವ ನೋಂದಣಿ ಅವಧಿಯನ್ನು ಪರಿಶೀಲಿಸುವಂತೆ ವಿವಿಧ ಪಾಲುದಾರರು ಒತ್ತಾಯಿಸುತ್ತಿದ್ದಾರೆ. ಕೆಲವು ಪಾಲುದಾರರು ನೋಂದಣಿ ಅಥವಾ ಒಂದು-ಬಾರಿ ನೋಂದಣಿಯ ಸಿಂಧುತ್ವದ ಅವಧಿಯನ್ನು ಹೆಚ್ಚಿಸುವಂತೆ ಒತ್ತಾಯಿಸಿದರೆ, ಕೆಲವು ಸಂದರ್ಭಗಳಲ್ಲಿ

ನೋಂದಣಿ ಅವಧಿಯನ್ನು ಭೂ ಮಂಜೂರಾತಿ ಅವಧಿಯೊಂದಿಗೆ ಸಮನ್ವಯಗೊಳಿಸುವ ಸಲುವಾಗಿ ನೋಂದಣಿಯ ಅವಧಿಯನ್ನು ಕಡಿಮೆ ಮಾಡಲು ಕೆಲವು ಭಾಗಗಳಿಂದ ಸರ್ಕಾರಕ್ಕೆ ಬೇಡಿಕೆಯಿದೆ. ಅದರಂತೆ, ಕ್ಷೇತ್ರದ ಅಗತ್ಯತೆಗಳು ಮತ್ತು ಚಾಲ್ತಿಯಲ್ಲಿರುವ ನಿಯಮಗಳಲ್ಲಿ ಆಯಾ ಸಂದರ್ಭಗಳಿಗೆ ಅನುಗುಣಾಗಿ ಅದರ ನವೀಕರಣ ಸೇರಿದಂತೆ ನೋಂದಣಿಯ ಮಾನ್ಯತೆಯ ಅವಧಿಯನ್ನು ಪ್ರಸ್ತುತ ಕಾಯ್ದೆಯಲ್ಲಿ ಸೂಚಿಸಿದಂತೆ 5 ವರ್ಷಗಳ ಅವಧಿಗಿಂತ ಹೆಚ್ಚಾಗಿ ನಿಗದಿಪಡಿಸಲು ಪ್ರಾಧಿಕಾರಕ್ಕೆ ಅಧಿಕಾರ ನೀಡಲು ಸೂಕ್ತ ತಿದ್ದುಪಡಿಗಳನ್ನು ಪ್ರಸ್ತಾಪಿಸಲಾಗಿದೆ. ಇದು ಕರಾವಳಿಯ ಜಲಕೃಷಿ ಫಾರ್ಮ್‌ಗಳ ನೋಂದಣಿ ಮತ್ತು ಇತರ ಚಟುವಟಿಕೆಗಳಲ್ಲಿ ಎದುರಾಗುವ ತೊಂದರೆಗಳನ್ನು ನಿವಾರಿಸುತ್ತದೆ.

## ‘ಅಭಿವೃದ್ಧಿ ಮುಕ್ತ ವಲಯ’ ವ್ಯಾಪ್ತಿಯಲ್ಲಿ ಹ್ಯಾಚರಿಗಳು, ಬಿಎಂಸಿಗಳು, ಎನ್‌ಬಿಸಿಗಳು, ಪಂಜರ ಮೀನುಕೃಷಿ ಇತ್ಯಾದಿಗಳಿಗೆ ವಿನಾಯಿತಿ ನೀಡುವುದು

CAA ಕಾಯ್ದೆ 2005 ರ ಸೆಕ್ಷನ್ 13(8) “ಅಭಿವೃದ್ಧಿ ಮುಕ್ತ ವಲಯ (ನೋ ಡೆವಲಪ್‌ಮೆಂಟ್ ಝೋನ್)” ವ್ಯಾಪ್ತಿಯಲ್ಲಿ ಕರಾವಳಿ ಜಲಕೃಷಿಯನ್ನು ನಿಷೇಧಿಸುತ್ತದೆ, ಇದು ಹೈ ಟೈಡ್ ಲೈನ್ (HTL) ನಿಂದ ಭೂಮುಖದ ಕಡೆಗೆ 200 ಮೀ ದೂರದಲ್ಲಿದ್ದು, ಕರಾವಳಿ ನಿಯಂತ್ರಣ ವಲಯದ (CRZ) ತೊರೆಗಳು, ನದಿಗಳು ಮತ್ತು ಹಿನ್ನೀರು ಪ್ರದೇಶಗಳು ಒಳಗೊಂಡಿರುತ್ತದೆ. ಸರ್ಕಾರವು ಕರಾವಳಿ ನಿಯಂತ್ರಣ ವಲಯದ ನಿಯಮಾವಳಿಗಳ ಅಧಿಸೂಚನೆಯಿಂದ ಕರಾವಳಿಯ ಜಲಕೃಷಿ ಹ್ಯಾಚರಿ ಚಟುವಟಿಕೆಯು ವಿನಾಯಿತಿ ಪಡೆದ ಚಟುವಟಿಕೆಯಾಗಿದೆ ಎಂದು ಉಲ್ಲೇಖಿಸುವುದು ಸೂಕ್ತವಾಗಿದೆ. ಕರಾವಳಿ ಜಲಕೃಷಿ ಪ್ರಾಧಿಕಾರ ಕಾಯ್ದೆಯ ಸೆಕ್ಷನ್ 13(8) ರ ನಿಬಂಧನೆಗಳು ’ಫಾರ್ಮ್’ ಅನ್ನು ನಿರ್ಬಂಧಿಸುವ ಉದ್ದೇಶವನ್ನು ಹೊಂದಿದ್ದು, ಅದು ಹ್ಯಾಚರಿಗಳಿಗೂ ಅನ್ವಯಿಸುತ್ತದೆ ಎಂದು ತಪ್ಪಾಗಿ ಅರ್ಥೈಸಲಾಗಿದೆ. ಇದಲ್ಲದೆ, ಸರ್ಕಾರವು ಸಮುದ್ರ ಕಳೆ ಕೃಷಿ ಮತ್ತು ಪಂಜರ ಕೃಷಿಯನ್ನು ಪ್ರಮುಖ ಗ್ರಾಮೀಣ ಆರ್ಥಿಕ ಚಟುವಟಿಕೆಯಾಗಿ ಉತ್ತೇಜಿಸುತ್ತಿದೆ. ಆದ್ದರಿಂದ ಅಂತಹ ಚಟುವಟಿಕೆಗಳನ್ನು CAA ಕಾಯ್ದೆಯ ಸೆಕ್ಷನ್ 13(8) ನಿಂದ ವಿನಾಯಿತಿ ನೀಡಲು ಪ್ರಸ್ತಾಪಿಸಲಾಗಿದೆ.

## ಕರಾವಳಿ ಜಲಚರಗಳ ಮೇಲೆ CRZ ಅಧಿಸೂಚನೆಯ ಅನ್ವಯದ ಬಗ್ಗೆ ಸ್ಪಷ್ಟತೆಯನ್ನು ತರಲು ಊರ್ಜಿತಗೊಳಿಸುವಿಕೆ ವಿಭಾಗದ ತಿದ್ದುಪಡಿ

ಕರಾವಳಿ ಜಲಕೃಷಿ ಪ್ರಾಧಿಕಾರ ಕಾಯಿದೆ, 2005 ರ ಸೆಕ್ಷನ್ 27 ರ ಅಡಿಯಲ್ಲಿ ಒದಗಿಸಿದಂತೆ, ಪರಿಸರ (ರಕ್ಷಣೆ) ಕಾಯ್ದೆ 1986ರ ಸೆಕ್ಷನ್ 3(1) ಮತ್ತು 3(2)(v) ಅಡಿಯಲ್ಲಿ ಮತ್ತು ಪರಿಸರ (ರಕ್ಷಣೆ) ನಿಯಮಾವಳಿ 5(3)(ಡಿ)ನಿಯಮದಲ್ಲಿ ಕರಾವಳಿ ಪ್ರದೇಶಗಳನ್ನು ಕರಾವಳಿ ನಿಯಂತ್ರಣ ವಲಯ (CRZ) ಎಂದು ಘೋಷಿಸಿ CRZ ನಲ್ಲಿ ಚಟುವಟಿಕೆಗಳನ್ನು ನಿಯಂತ್ರಿಸಲು ಹೊರಡಿಸಲಾದ CRZ ಅಧಿಸೂಚನೆಯ ವ್ಯಾಪ್ತಿಯಲ್ಲಿ ಕರಾವಳಿ ಜಲಕೃಷಿಯು ಪರಿಗಣಿತವಾಗುವುದಿಲ್ಲವೆಂದು ಅರ್ಥೈಸಲಾಗಿದೆ. "ಸ್ಟೇಟ್ಮೆಂಟ್ ಆಫ್ ಆಬ್ಜೆಕ್ಟ್ಸ್" ಮತ್ತು ಕರಾವಳಿ ಜಲಕೃಷಿ ಪ್ರಾಧಿಕಾರ ಕಾಯಿದೆ, 2005 ರ ಕಾರಣಗಳಲ್ಲಿ ಸೂಚಿಸಿದಂತೆ, CRZ ಅಧಿಸೂಚನೆಯ ಅರ್ಥದಲ್ಲಿ ಕರಾವಳಿ ಜಲಕೃಷಿಯನ್ನು ಒಂದು ನಿಷೇಧಿತ ಚಟುವಟಿಕೆಯಾಗಿ ಪರಿಗಣಿಸಬಾರದು ಎನ್ನುವ ಉದ್ದೇಶದಿಂದ ಸರ್ಕಾರವು CAA ಕಾಯ್ದೆ 2005 ಅನ್ನು ತಂದಿದೆ. ಕಾರ್ಮಿಕರ ಉದ್ಯೋಗದ ಉಳಿಸುವಿಕೆಗಾಗಿ ಮತ್ತು ಈ ಆರ್ಥಿಕ ಚಟುವಟಿಕೆಯಲ್ಲಿ ಈಗಾಗಲೇ ಮಾಡಿದ ಹೂಡಿಕೆಯನ್ನು ಉಳಿಸುವುದು ಮತ್ತು ಪರಿಸರವನ್ನು ಸಂರಕ್ಷಿಸುವ ಅವಶ್ಯಕತೆಗೆ ಅನುಗುಣವಾಗಿ ಜಲಚರ ಕೃಷಿಯ ಭವಿಷ್ಯದ ಬೆಳವಣಿಗೆಯನ್ನು ಒದಗಿಸುವುದು ಅಗತ್ಯವೆಂದು ಸರ್ಕಾರ ಪರಿಗಣಿಸಿದೆ. ಮೇಲಿನ ಗುರಿಗಳನ್ನು ಸಾಧಿಸಲು ಮತ್ತು ಎಲ್ಲಾ ಸಂದೇಹಗಳನ್ನು ನಿವಾರಿಸಲು, ಈ CRZ ಅಧಿಸೂಚನೆಯ ಅರ್ಥದಲ್ಲಿ ಜಲಕೃಷಿ ಚಟುವಟಿಕೆಯು ನಿಷೇಧಿತ ಚಟುವಟಿಕೆಯ ಉದ್ದೇಶವನ್ನು ಹೊಂದಿಲ್ಲ ಎಂದು

ಸ್ಪಷ್ಟಪಡಿಸಲು CRZ ಅಧಿಸೂಚನೆಯನ್ನು ತಿದ್ದುಪಡಿ ಮಾಡಲು ನಿರ್ಧರಿಸಲಾಯಿತು. ಆದಾಗ್ಯೂ, ಕರಾವಳಿ ಜಲಕೃಷಿ ಪ್ರಾಧಿಕಾರ ಕಾಯ್ದೆಯ ಸೆಕ್ಷನ್ 27 ರಲ್ಲಿ ಚಾಲ್ತಿಯಲ್ಲಿರುವ ಅಸ್ಪಷ್ಟತೆಯಿಂದಾಗಿ ಸರ್ಕಾರದ ಉದ್ದೇಶವನ್ನು ತಪ್ಪಾಗಿ ಅರ್ಥೈಸಲಾಗಿದೆ. ಇದಲ್ಲದೆ, ಕರಾವಳಿ ಜಲಕೃಷಿಯಲ್ಲಿ CRZ ನಿಯಂತ್ರಣದ ಅನುಷ್ಠಾನವು ಬಹುಮುಖ ನಿಯಂತ್ರಣ ಮತ್ತು ಮೀನುಕೃಷಿಕರು ಮತ್ತು ಉದ್ಯಮಿಗಳಿಗೆ ಕಿರುಕುಳವನ್ನು ಉಂಟುಮಾಡಿದೆ. ಆದ್ದರಿಂದ, ಈ ಅಸ್ಪಷ್ಟತೆಯನ್ನು ನಿವಾರಿಸಿ, ಸ್ಪಷ್ಟತೆಯನ್ನು ತರಲು, ಪರಿಚ್ಛೇದ 27 ರ ತಿದ್ದುಪಡಿಯನ್ನು ಪರಿಸರ (ರಕ್ಷಣೆ) ಕಾಯ್ದೆ 1986ಯ ಸೆಕ್ಷನ್ 3(1) ಮತ್ತು ಸೆಕ್ಷನ್ 3(2)(v) ಅಡಿಯಲ್ಲಿ ಮತ್ತು ಪರಿಸರ (ರಕ್ಷಣೆ) ನಿಯಮ, 1986 ರ ನಿಯಮ 5(3)(ಡಿ)ಯಲ್ಲಿ ಹೊರಡಿಸಲಾದ CRZ ಅಧಿಸೂಚನೆಯ ವ್ಯಾಪ್ತಿಯಿಂದ ಕರಾವಳಿ ಜಲಕೃಷಿಯನ್ನು ವಿನಾಯಿತಿ ಮಾಡಲು ಪ್ರಸ್ತಾಪಿಸಲಾಗಿದೆ.

## ನವೀಕರಣ ಅರ್ಜಿಯನ್ನು ಸಲ್ಲಿಸುವಲ್ಲಿ ವಿಳಂಬ ಮನ್ನಾ ನೀಡುವಿಕೆ

ಕರಾವಳಿ ಜಲಕೃಷಿ ಚಟುವಟಿಕೆಗಳ ನಿರಂತರ ನಿಯಂತ್ರಿತ ಮತ್ತು ದೂರು ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಲು ಸಂಯೋಜಿತ ಶುಲ್ಕದೊಂದಿಗೆ ಕರಾವಳಿ ಜಲಕೃಷಿ ಚಟುವಟಿಕೆಯ ನೋಂದಣಿ ನವೀಕರಣಕ್ಕಾಗಿ ಅರ್ಜಿ ಸಲ್ಲಿಸುವಲ್ಲಿ ವಿವಿಧ ಕಾರಣಗಳಿಂದ ಉಂಟಾದ ವಿಳಂಬವನ್ನು ಮನ್ನಾ ಮಾಡಲು ಅವಕಾಶ ಕಲ್ಪಿಸಲಾಗಿದೆ.

## ಪ್ರಮಾಣ ಪತ್ರದ ವಿರೂಪ / ಹಾನಿ / ಕಳೆದು ಹೋದ ಸಂದರ್ಭದಲ್ಲಿ ಹೊಸ ಪ್ರಮಾಣಪತ್ರವನ್ನು ಒದಗಿಸಲು ಮತ್ತು ಬದಲಾವಣೆಗಳನ್ನು ಜಾರಿಗೆ ತರಲು ಅವಕಾಶ.

ಮಾಲೀಕತ್ವ ಅಥವಾ ಚಟುವಟಿಕೆಯ ಪ್ರಮಾಣದಲ್ಲಿ ಬದಲಾವಣೆಗಳ ಸಂದರ್ಭದಲ್ಲಿ, ಪ್ರಸ್ತುತ ಸನ್ನಿವೇಶದಲ್ಲಿ, ಮರು-ನೋಂದಣಿ/ ನೋಂದಣಿ ಮಾಡಿಕೊಡುವುದರಲ್ಲಿ ಭಾರಿ ವಿಳಂಬ ಉಂಟಾಗುತ್ತಿದೆ. ಪ್ರಸ್ತುತ ತಿದ್ದುಪಡಿಯು ಮಾಲೀಕತ್ವ ಅಥವಾ ಚಟುವಟಿಕೆಯ ಗಾತ್ರದಲ್ಲಿ ಬದಲಾವಣೆಗಳ ಸಂದರ್ಭದಲ್ಲಿ ನೋಂದಣಿ ಪ್ರಮಾಣಪತ್ರಕ್ಕೆ ಬದಲಾವಣೆಗಳನ್ನು ಮಾಡಲು ಹಾಗೂ ಪ್ರಮಾಣ ಪತ್ರದ ವಿರೂಪ /ಹಾನಿ ಕಳೆದು ಹೋದ ಸಂದರ್ಭದಲ್ಲಿ ಹೊಸ ಪ್ರಮಾಣಪತ್ರವನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

## ಮೇಲ್ಮನವಿ ಮತ್ತು ಮೇಲ್ಮನವಿ ಪ್ರಾಧಿಕಾರಿಗಳ ನೇಮಕಕ್ಕೆ ಅವಕಾಶ

ಶಿಕ್ಷೆ ಕುರಿತಾದ ತಿದ್ದುಪಡಿ ಗಳಿಗೆ ಅವಕಾಶ ಕಲ್ಪಿಸಿರುವುದಿಂದ ಮೇಲ್ಮನವಿ ಮತ್ತು ಮೇಲ್ಮನವಿ ಪ್ರಾಧಿಕಾರಿಗಳ ನೇಮಕಕ್ಕೆ ಅವಕಾಶ ಕಲ್ಪಿಸುವುದ ಅನಿವಾರ್ಯವಾಗಿದ್ದು ಅದರಂತೆ ತಿದ್ದುಪಡಿ ಸೇರ್ಪಡಿಸಲು ಪ್ರಸ್ತಾಪಿಸಿದೆ.

## ಕಾಯ್ದೆಯ ನಿರಪರಾಧೀಕರಣ

CAA ಕಾಯ್ದೆ, 2005 ರ ಸೆಕ್ಷನ್ 14 ರ ಅಡಿಯಲ್ಲಿ ನೋಂದಣಿ ಇಲ್ಲದೆ ಕರಾವಳಿ ಜಲಕೃಷಿ ಕೈಗೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ಸದರಿ ಕಾಯ್ದೆಯ ಅಡಿಯಲ್ಲಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ದಂಡವನ್ನು ವಿಧಿಸಬಹುದಾದ, ಅಥವಾ ಎರಡನ್ನು ಜೊತೆಗೇ ವಿಧಿಸಬಹುದಾದ ಅಂಶ ಒಳಗೊಂಡಿದೆ. ನೋಂದಣಿ ಇಲ್ಲದೆ ಕೃಷಿಗಾಗಿ ವಿಧಿಸುವ 3 ವರ್ಷಗಳವರೆಗೆ ಜೈಲು ಶಿಕ್ಷೆಯ ನಿಬಂಧನೆಗಳು ಅತಿಕಠಿಣ ಶಿಕ್ಷೆಯಾಗಿದೆ ಮತ್ತು ಪರ್ಯಾಯ ದಂಡದ ನಿಬಂಧನೆಗಳೊಂದಿಗೆ ಅದನ್ನು ಮರುಪರಿಶೀಲಿಸುವ ಅಗತ್ಯವಿದೆ ಎಂದು ಕೃಷಿಕರು ಮತ್ತು ಇತರ ಪಾಲುದಾರರು ಅಭಿಪ್ರಾಯಪಟ್ಟು ಮನವಿ ಸಲ್ಲಿಸಿರುತ್ತಾರೆ. ಇದಲ್ಲದೆ, ಜಲಕೃಷಿಕರು ಕೈಗೊಳ್ಳುವ ಕೃಷಿ

ಚಟುವಟಿಕೆಯಾಗಿದೆ ಮತ್ತು ನೋಂದಣಿ ಮಾಡದಿರುವುದನ್ನು ಕ್ರಿಮಿನಲ್ ಎಂದು ಪರಿಗಣಿಸುವುದು ಸೂಕ್ತವಲ್ಲವೆಂದು ಮನವಿ ಮಾಡಿರುತ್ತಾರೆ. ಸಿಎಎ ಕಾಯ್ದೆಯನ್ನು 17 ವರ್ಷಗಳ ಹಿಂದೆ ಜಾರಿಗೊಳಿಸಲಾಗಿದ್ದರೂ, ಅದು ಜಾರಿಗೆ ಬಂದ ನಂತರ ಕಳೆದ 17 ವರ್ಷಗಳಲ್ಲಿ ಕಾಯಿದೆಯ ಸೆಕ್ಷನ್ 14 ಅನ್ನು ಇದುವರೆಗೂ ಲಾಗೂಗೊಳಿಸಿರುವುದಿಲ್ಲ. ಈ ನಿಬಂಧನೆಯು ಅನಗತ್ಯ ಮತ್ತು ಮರುಪರಿಶೀಲನೆಗೆ ಸೂಕ್ತವಾಗಿದೆ ಎಂದು ಸೂಚಿಸಲಾಗಿದೆ. ವಿವಿಧ ಕಾನೂನುಗಳ ಅಡಿಯಲ್ಲಿ ಸಣ್ಣ ಅಪರಾಧಗಳನ್ನು ನಿರಪರಾಧೀಕರಿಸಲು ಸರ್ಕಾರವು ಮಾಡುತ್ತಿರುವ ಪ್ರಯತ್ನಗಳನ್ನು ಗಮನದಲ್ಲಿಟ್ಟುಕೊಂಡು, ಜೈಲು ಶಿಕ್ಷೆಯ ನಿಬಂಧನೆಗಳನ್ನು ತೆಗೆದುಹಾಕಲು CAA ಕಾಯಿದೆ, 2005 ರ ಸೆಕ್ಷನ್ 14 ಅನ್ನು ತಿದ್ದುಪಡಿ ಮಾಡುವ ಮೂಲಕ CAA ಕಾಯಿದೆ, 2005 ಅನ್ನು ನಿರಪರಾಧೀಕರಿಸಲು ಪ್ರಸ್ತಾಪಿಸಲಾಗಿದೆ. ಆದಾಗ್ಯೂ, ಕರಾವಳಿ ಪರಿಸರದ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಮಾಲಿನ್ಯಕಾರಕ ಪಾವತಿಸುವ ತತ್ವವನ್ನು ಅನ್ವಯಿಸುವ ಕಾಯ್ದೆಯಡಿಯಲ್ಲಿ ಜೈಲು ಶಿಕ್ಷೆಗೆ ಬದಲಾಗಿ ಸೂಕ್ತವಾದ ವಿತ್ತೀಯ ಮತ್ತು ಇತರ ದಂಡಗಳ ಸಂಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಕಾಯಿದೆಯ ನಿಬಂಧನೆಗಳನ್ನು ನೋಂದಾಯಿಸದಿರುವುದು ಮತ್ತು ಅನುಸರಣೆ ಮಾಡದಿದ್ದಕ್ಕಾಗಿ ಪ್ರಸ್ತಾಪಿಸಲಾದ ಪರ್ಯಾಯ ದಂಡಗಳನ್ನು ಉದ್ದೇಶಕ್ಕಾಗಿ ಅಧಿಕಾರ ಹೊಂದಿರುವ ಪ್ರಾಧಿಕಾರಿಗಳಿಂದ ನಿರ್ಣಯಿಸಲಾಗುತ್ತದೆ ಮತ್ತು ವಿಧಿಸಲಾಗುತ್ತದೆ. ವಿತ್ತೀಯ ದಂಡಗಳನ್ನು ಪ್ರಸ್ತಾಪಿಸುವಾಗ, ಅಧಿಕೃತ ವಿವೇಚನೆಯನ್ನು ತೆಗೆದುಹಾಕಲು ವಿಧಿಸಬಹುದಾದ ದಂಡದ ಮೊತ್ತದಲ್ಲಿ ಪಾರದರ್ಶಕತೆ ಮತ್ತು ವಸ್ತುನಿಷ್ಠತೆಯನ್ನು ತರಲಾಗಿದೆ. ಸಣ್ಣ ರೈತರಿಗೆ ಅನಗತ್ಯವಾಗಿ ಹೊರೆಯಾಗದಂತೆ ಖಾತ್ರಿಪಡಿಸಲು ದಂಡದ ಪ್ರಮಾಣವನ್ನು ಪ್ರಸ್ತಾಪಿಸುವಾಗ ಸರಿಯಾದ ಕಾಳಜಿಯನ್ನು ತೆಗೆದುಕೊಳ್ಳಲಾಗಿದೆ. ಮಾರ್ಗದರ್ಶಿ ಸೂತ್ರಗಳ ಮೂಲಕ ಪ್ರಾಧಿಕಾರದ ನಿಯಂತ್ರಣ ಚೌಕಟ್ಟಿನಲ್ಲಿ ಮುನ್ನೆಚ್ಚರಿಕೆ ತತ್ವಗಳನ್ನು ಅಳವಡಿಸಲಾಗಿದೆ ಎಂದು ಉಲ್ಲೇಖಿಸುವುದು ಸೂಕ್ತವಾಗಿದೆ. ಇದು ಪರಿಸರದೊಂದಿಗೆ ಸಾಮರಸ್ಯದಿಂದ ಭಾರತದಲ್ಲಿ ಕರಾವಳಿ ಜಲಕೃಷಿ ಸಾಮರ್ಥ್ಯವನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ ಮತ್ತು ಜನತೆಗೆ ಅಗ್ಗದ ಮತ್ತು ಸುರಕ್ಷಿತ ಪ್ರೋಟೀನ್‌ನ ಸುಸ್ಥಿರ ಉತ್ಪಾದನೆಯನ್ನು ಹೆಚ್ಚಿಸುತ್ತದೆ.

ಸಹಿ/-

ಡಾ.ಜೆ.ಬಾಲಾಜಿ, ಭಾ.ಆ.ಸೇ.

ಜಂಟಿ ಕಾರ್ಯದರ್ಶಿ

ಮೀನುಗಾರಿಕೆ ಇಲಾಖೆ

ಭಾರತ ಸರ್ಕಾರ